C.R.P.67

Form No.4
(Civil)
Deposition
Sheets
(R.P.No.57)

**6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ಸಂಖ್ಯೆ: 296/2018**

**ಪ್ರಾಸಾ. 32 ಚಾಸಾ. 44**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಎಸ್ ಆರ್ ಮಂಜುನಾಥ |
| **ತಂದೆಯ ಹೆಸರು** | : | ರಾಮೇಗೌಡ |
| **ವಯಸ್ಸು** | : | 46 ವರ್ಷಗಳು |
| **ಉದ್ಯೋಗ** | : | ಪೊಲೀಸ್ ಇನ್ಸ್‌ಪೆಕ್ಟರ್, ತಣಿಸಂದ್ರ ಪೊಲೀಸ್ ತರಬೇತಿ ಶಾಲೆ. |
| **ವಾಸ** | : | ಬೆಂಗಳೂರು. |

**ಪ್ರಮಾಣ ವಚನ ಬೋಧಿಸಿದ ದಿನಾಂಕ: 05.05.2025**

**ಮುಖ್ಯ ವಿಚಾರಣೆ: ಮಾನ್ಯ ಪ್ರಭಾರಿ ಸರ್ಕಾರಿ ಅಭಿಯೋಜಕರಿಂದ:**

ನಾನು ಅಕ್ಟೋಬರ್ 2017 ರಿಂದ ಜನವರಿ 2020 ರವರೆಗೆ ನಂದಗುಡಿಯ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 18.11.2011 ರಂದು ನಂದಗುಡಿ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 217/2007 ರ ಪ್ರಕರಣದ ತನಿಖೆಯ ಉಸ್ತುವಾರಿಯನ್ನು ಚಾಸಾ-47 ರವರಿಂದ

ವಹಿಸಿಕೊಂಡಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ವಿಜಯ್ ಕುಮಾರ್/ಚಾಸಾ-7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನ

3. ದಿನಾಂಕ 19.11.2017 ರಂದು ವೈಟ್ ಫೀಲ್ಡ್ ನ ಕೊಲಂಬಿಯಾ ಏಷಿಯಾ ಆಸ್ಪತ್ರೆಯಲ್ಲಿ ಶವಗಾರದಲ್ಲಿ ಇಟ್ಟಿದ್ದಂತಹ ಈ ಪ್ರಕರಣದ ಮೃತೆ ಕವಿತಾರವರ ಶರೀರದ ಮೇಲೆ ಶವ ತನಿಖಾ ವರದಿಯನ್ನು ತಯಾರು ಮಾಡವ ಸಂದರ್ಭದಲ್ಲಿ ಸಾಕ್ಷಿದಾರರಾಗಿ ಹಾಜರಿರಲು ಚಾಸಾ-16 ರಿಂದ 20 ರವರಿಗೆ ನೋಟಿಸ್ ನ್ನು ಜಾರಿ ಮಾಡಿ ಅವರಿಗೆ ಕೃತ್ಯದ ಸಾರಾಂಶವನ್ನು ತಿಳಿಸಿದ್ದು, ಅವರು ಶವ ತನಿಖಾ ಕಾಲದಲ್ಲಿ ಹಾಜರಿದ್ದು, ಶವ ಪಂಚನಾಮೆಯನ್ನು ಬೆಳಗ್ಗೆ 10.00 ಗಂಟೆಯಿಂದ 12.30 ಗಂಟೆಯವರೆಗೆ ನಡೆಸಿ, ನಂತರ ಶವವನ್ನು ವೈದೇಹಿ ಆಸ್ಪತ್ರೆ, ವೈಟ್ ಫೀಲ್ಡ್ ಗೆ ಮರಣೋತ್ತರ ಪರೀಕ್ಷೆ ಸಲುವಾಗಿ ಸಿಬ್ಬಂದಿ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿ ನಿಶಾನೆ ಪಿ-16 ಶವತನಿಖಾ ಪಂಚನಾಮೆಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-16(ಸಿ) ಎಂದ ಗುರುತಿಸಲಾಯಿತು. ಅದೇ ದಿನ ಚಾಸಾ-19 ಮತ್ತು 20 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

4. ದಿನಾಂಕ 20.11.2017 ರಂದು ಠಾಣೆಗೆ 1 ರಿಂದ 3 ನೇ ಆರೋಪಿಗಳನ್ನು ಹೆಚ್ ಕ್ರಾಸ್ ಬಳಿಯಿಂದ ಚಾಸಾ-39 ರಿಂದ 41 ಮತ್ತು ಚಾಸಾ-43 ರವರು ಆರೋಪಿತರನ್ನು 7.00 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. 1 ರಿಂದ 3 ನೇ ಆರೋಪಿತರನ್ನು ವಿಚಾರಣೆ ಮಾಡಿ ದಸ್ತಗಿರಿ ಕ್ರಮವನ್ನು ಕೈಗೊಂಡಿರುತ್ತೇನೆ. ಹೆಚ್ಚಿ ನ ತನಿಖೆಗಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಆರೋಪಿತರನ್ನು ಪೊಲೀಸ್ ವಶಕ್ಕೆ ಪಡೆದು, ಸುರಕ್ಷಿತ ಬಂಧನದಲ್ಲಿ ಇಟ್ಟಿರುತ್ತೇನೆ. ದಿನಾಂಕ 21.11.2017 ರಂದು ಆರೋಪಿತರ ಸ್ವಇಚ್ಚಾ ಹೇಳಿಕೆಗಳನ್ನು ಸಂಗ್ರಹಿಸಿರುತ್ತೇನೆ. 1 ನೇ ಆರೋಪಿ ತನ್ನ ಸ್ವಇಚ್ಚಾ ಹೇಳಿಕೆಯಲ್ಲಿ ನಮ್ಮ ಮನೆಗೆ ನನ್ನನ್ನು ಕರೆದುಕೊಂಡು ಹೋದರೆ ನಾನು ಡಾಬಾದಿಂದ

ಸಾಗಾಟ ಮಾಡಿದ ವಸ್ತುಗಳು ಹಾಗೂ ಆಯುಧವಾದ ಚಾಕುವನ್ನು ತೋರಿಸುವುದಾಗಿ ನುಡಿದಿರುತ್ತಾನೆ. 1 ನೇ ಆರೋಪಿಯ ಸ್ವಇಚ್ಚಾ ಹೇಳಿಕೆಯಲ್ಲಿ ಸಂಬಂಧಪಟ್ಟ ಭಾಗವನ್ನು ನಿಶಾನೆ ಪಿ-34 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-34(ಎ) ಎಂದು ಗುರುತಿಸಲಾಯಿತು. ಅದೇ ರೀತಿ 2 ನೇ ಆರೋಪಿ ತನ್ನ ಸ್ವಇಚ್ಚಾ ಹೇಳಿಕೆಯಲ್ಲಿ ನಮ್ಮ ಮನೆಗೆ ನನ್ನನ್ನು ಕರೆದುಕೊಂಡು ಹೋದರೆ ನಾನು ಡಾಬಾದಿಂದ ಸಾಗಾಟ ಮಾಡಿದ ವಸ್ತುಗಳು ಹಾಗೂ ಆಯುಧವಾದ ಚಾಕುವನ್ನು ತೋರಿಸುವುದಾಗಿ ನುಡಿದಿರುತ್ತಾನೆ. 2 ನೇ ಆರೋಪಿಯ ಸ್ವಇಚ್ಚಾ ಹೇಳಿಕೆಯಲ್ಲಿ ಸಂಬಂಧಪಟ್ಟ ಭಾಗವನ್ನು ನಿಶಾನೆ ಪಿ-35 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-35(ಎ) ಎಂದು ಗುರುತಿಸಲಾಯಿತು. ಅದೇ ರೀತಿ 3 ನೇ ಆರೋಪಿ ತನ್ನ ಸ್ವಇಚ್ಚಾ ಹೇಳಿಕೆಯಲ್ಲಿ ಡಾಬಾದಿಂದ ತಾನು ತೆಗೆದುಕೊಂಡು ಹೋಗಿದ್ದ ದ್ವಿಚಕ್ರ ವಾಹನ ನೋಂದಣಿ ಸಂಖ್ಯೆ ಕೆಎ-03-ಇಹೆಚ್-6457 ಬಾಕ್ಸರ್ ವಾಹನವನ್ನು ತೋರಿಸುವುದಾಗಿ ನುಡಿದಿರುತ್ತಾನೆ. 3 ನೇ ಆರೋಪಿಯ ಸ್ವಇಚ್ಚಾ ಹೇಳಿಕೆಯಲ್ಲಿ ಸಂಬಂಧಪಟ್ಟ ಭಾಗವನ್ನು ನಿಶಾನೆ ಪಿ-36 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-36(ಎ) ಎಂದು ಗುರುತಿಸಲಾಯಿತು. ಅದೇ ದಿನ ವಿಜಯಪುರ ಕೋಲಾರ ರಸ್ತೆಯಲ್ಲಿ ಇದ್ದ ಕವಿತಾ ಡಾಬಾದಲ್ಲಿ ಪಂಚರಾದ ಕೊಂಡಪ್ಪ ಮತ್ತು ಲೋಕೇಶ್ ರವರ ಸಮಕ್ಷಮ ಸಿಸಿಟಿವಿ ಕ್ಯಾಮೆರಾ ಆಪರೇಟರ್ ತಿಳಿಸಿದಂತೆ ಸಿಪಿ ಪ್ಲಸ್ ಕಂಪನಿಯ ಕಪ್ಪು ಬಣ್ಣದ ಕಾಸ್ಮಿಕ್ ಹಾರ್ಡ್ ಡಿಸ್ಕ್ ಮಾಡಲ್, ಸಿಪಿಯುಆರ್ 080-E-S ನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಎಸ್ ಎಂಬ ಅಕ್ಷರದಿಂದ ಮಾರ್ಕ್ ಮಾಡಿ ವಶಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಬೆಳಗ್ಗೆ 11.00 ಗಂಟೆಯಿಂದ 12.00 ಗಂಟೆಯವರೆಗೆ ಜರುಗಿಸಿರುತ್ತೇನೆ. ನಂತರ ಠಾಣೆಗೆ ವಾಪಸ್ಸು ಬಂದು ವಶಪಡಿಸಿಕೊಂಡ ವಸ್ತುಗಳ ಸಂಬಂಧ ಮಾಲುಪಟ್ಟಿ ಸಂಖ್ಯೆ 129/2017 ರಲ್ಲಿ ನಮೂದಿಸಿಕೊಂಡಿರುತ್ತೇನೆ. ಸಾಕ್ಷಿ ನಿಶಾನೆ ಪಿ-18 ನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-18(ಸಿ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸ್ವತ್ತುಗಳನ್ನು ಗುರುತಿಸುವ ಸಲುವಾಗಿ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.